ಚಿಕ್ಕವನಾದ ನಿನ್ನ ನೋಡಿಕೊಳ್ಳೋದೂ ಇತ್ತಲ್ವ, ಮದುವೆಯಾಗ್ಬೇಕು ಅಂತ ನಿರ್ಧರಿಸಿದ್ರೆ ಏನೋ ತಪ್ಪು? ಚಿಕ್ಕಮ್ಮನಿಗೆ ಮೊದಲ ಮದುವೆ; ಅವಳದೆ ಆದ ಜೀವನದ ಬಯಕೆ ಇರಲ್ವೇನೋ? ತನ್ನದೇ ಮಗ ಬೇಕು ಅಂತ ಆಸೆ ಪಟ್ರೆ ಪಟ್ಕೊಳ್ಳಲಿ ಬಿಡು. ನಿನ್ನ ತಾಯಿಯೇ ಬದುಕಿದ್ರೂ ನೀನೇನು ಕಡಿದು ಹಾಕ್ತಿದ್ದೆ? ದೂರದ ಶಹರದಲ್ಲಿದೀಯ; ಅಮೆರಿಕದಲ್ಲು ಇರೋ ಸಂಭವ ಇತ್ತು. ಎಷ್ಟು ಜನ ತಾಯಿ ಸಂಗಡವಿರ್ತಾರೆ ಈಗ ಹೇಳು? ಇಂತಾ ಸಂಕೀರ್ಣಗಳನ್ನ ಮನದಿಂದ ಕಿತ್ತುಹಾಕಿ ಎದುರಿರೋ ಖಾಲಿ ರಸ್ತೇಲಿ ಮೂಡಿಸ್ಬೇಕಾದ ಹೆಜ್ಜೆಗಳ ಬಗ್ಗೆ ಯೋಚಿಸು. ನಾನು ಸಹಕಾರ ಕೊಡತೀನಿ ಬೇಕಿದ್ರೆ.' ಹೋದ ವಾಲಂಟೈನ್ ಡೇಯಲ್ಲೂ ಇಬ್ಬರೂ ಸೇರಿ ಊಟ ಮಾಡಿದ್ದರು. ಯಾವುದೋ ಮಾತಿಗೆ, 'ನಿನ್ನ ಮನಸಲ್ಲೊಂದು ಮಡುವು ಮಾಡಿಕೊಂಡಿದೀಯ. ಎಮ್ಮೆಯಂತೆ ಆ ಕರಡು ನೀರಲ್ಲಿ ಬಿದ್ದಿಕೊಂಡು ಅದನ್ನೆ ಮಜಾ ಅಂದುಕೊಂಡು ಬಿದ್ದಿರತೀಯ. ಎದ್ದು ಹೊರಗೆ ಬಾರೋ' ಅಂದಿದ್ದಳು. ಎಲ್ಲದರಲ್ಲು ಒಂದು ಪರೋಕ್ಷ ಸೂಚನೆಯಿತ್ತೋ ಎಂಬ ಗುಮಾನಿ ಬರತೊಡಗಿತು ಧನಂಜಯನಿಗೆ. ಕಬ್ಬಿನ ಸಿಪ್ಪೆ ಜಗಿಯುತ್ತ ಸಿಹಿಯಿಲ್ಲ ಅಂತ ಪರಿತಪಿಸೋ ಬದಲು ಕಬ್ಬು ಬೆಳೆಯೋ ಬಗ್ಗೆ ಯೋಚಿಸಬೇಕಿತ್ತು. ಅದ್ಯಾಕೋ ಒಂದು ಗೆರೆ ದಾಟಿ ಮಾತಾಡಲಾಗಲೆ ಇಲ್ಲ! ಇವತ್ತದನ್ನೆಲ್ಲ ದಾಟಿ ಮುಗಿಸುತ್ತೇನಲ್ಲ ಎಂಬ ಸಮಾಧಾನದಲ್ಲಿ ಗಡಿಯಾರ ನೋಡಿದ. ಒಂದು ಗಂಟೆಯಾಗಿತ್ತು. ಗಾಬರಿಯಲ್ಲಿ ರಸ್ತೆ ನೋಡಿದ. ಬೀನಾ ಇರಬಹುದು ಎಂಬ ಭ್ರಮೆಯುಂಟು ಮಾಡಿದವರ್‍ಯಾರೂ ಅವಳಾಗಿರಲಿಲ್ಲ. ಆತಂಕದಲ್ಲಿ ಮೊಬೈಲೆತ್ತಿಕೊಂಡ.

'ಎಲ್ಲಿದೀಯ, ಯಾಕೆ ತಡ?' ಕಾತರದ ಪ್ರಶ್ನೆಗೆ ಉತ್ತರ ಬಂತು: '...ನಾವು ಊಟ ಮಾಡತಿದೀವಿ.' ಚುರುಕ್ಕೆನ್ನಿಸಿ 'ಬೀನಾ... ನಾನಿಲ್ಲಿ ಎಷ್ಟು ಹೊತ್ತಿಂದ ಕಾಯತಿದೀನಿ. ನಿನಗೊಂದು ಸಿಹಿ ಸುದ್ದಿ ಹೇಳಬೇಕೂಂತ ಕಾತರಿಸುತ್ತಿದ್ರೆ...' ಅವಳು 'ಆಮೇಲೆ ಮಾತಾಡೋಣ ಪ್ಲೀಸ್...' ಅಂತ ಕರೆಯನ್ನು ತುಂಡರಿಸಿದಳು. ಮತ್ತೆ ಕರೆ ಮಾಡಿದರೆ ಸ್ವಿಚ್ ಆಫ್ ಸಂದೇಶ ಬರತೊಡಗಿತು. ಅರ್ಥವಾಗದ ಜಗತ್ತು ಗಿರ್‍ರನೆ ತಿರುಗುತ್ತಿರುವಂತಾಗಿ ಗಾಜಿನ ಗೋಡೆಯನ್ನು ಒದ್ದು ಪುಡಿಪುಡಿ ಮಾಡಿಬಿಡಬೇಕೆನಿಸಿತು. ಎದ್ದ. 'ಸರ್... ಆರ್ಡರ್...' ಅನ್ನುತ್ತ ಬಂದ ವೇಟರಿಗೆ 'ಎಂತದೂ ಬೇಡ' ಅಂತ ನೀರಸ ದನಿಯಲ್ಲಿ ಹೇಳಿ ಕೈಗೆ ಬಂದ ನೋಟೊಂದನ್ನು ಕೊಟ್ಟು ಹೊರಬಿದ್ದ. ಸಂಜೆ ಐದುಗಂಟೆಗೆ ಬೀನಾಳ ಕರೆ ಬಂತು. 'ಕ್ಷಮಿಸೋ... ನಾನು ದೀಪಕ್ ಜೊತೆ ಊಟ ಮಾಡತಾ ಇದ್ದೆ. ಊಟಕ್ಕೆ ಬರಕ್ಕಾಗಲ್ಲ ಅಂತ ನಿನ್ನೆನೇ ಮೆಸೇಜ್ ಕಳಿಸಿದ್ದೆ, ನೋಡಲಿಲ್ವ ನೀನು? ದೀಪಕ್ ನನಗೆ ಪ್ರಪೋಸ್ ಮಾಡಿದ. ಅವನ ಸಂಗಡವೆ ನಾನು ಊಟಕ್ಕೆ ಹೋಗಬೇಕು ತಾನೇ?' ಗಲಿಬಿಲಿಯಲ್ಲಿ 'ಏನು? ಏನಂದೆ? ಅದ್ಹೇಗೆ ಯಾರೋ ಪ್ರಪೋಸ್ ಮಾಡತಾರೆ? ನಾ ನಿನ್ನ ಇಷ್ಟ ಪಡತೀನಿ ಬೀನಾ. ಪ್ರಪೋಸ್ ಮಾಡೋಕಂತಲೇ ಉಂಗುರಾ ಸಹ ತಂದುಕೊಂಡು ಕಾಯತಿದ್ರೆ ನೀನು...' ಎತ್ತರದ ದನಿ ತೊದಲತೊಗಿತು. ಆ ಕಡೆ ನಿಟ್ಟುಸಿರ ಸದ್ದು ಕೇಳಿತು '...ಅಲ್ಲವೋ ಇಷ್ಟುದಿನ ಬಿಟ್ಟು ಈಗ ಹೇಳತೀಯ. ಇಷ್ಟ ಪಡತೀನಿ ಅಂತ ಒಂದು ಮಾತು ನಿನ್ನ ಬಾಯಿಂದ ಬರುತ್ತೋ ಅಂತ ಎಷ್ಟು ಕಾದೆ. ಪರೋಕ್ಷ ಸೂಚನೆ ಕೊಟ್ಟೆ, ಊಹುಂ. ನಿನ್ನ ಮನಸಲ್ಲಿ ಹಾಗಿರಲಿಕ್ಕಿಲ್ಲ ಅಂತ ಸುಮ್ಮನಾದೆ. ಒಂದು ಹೇಳತೀನಿ ಕೇಳು: ನಿಂಗೆ ಹಿಂಜರಿತ ಜಾಸ್ತಿ; ಎಲ್ಲಾ ನಿಧಾನ. ನನ್ನ ಸ್ವಭಾವಕ್ಕೆ ಇದು ಹೊಂದೋಲ್ಲ. ಮುಂದೆ ತೊಂದರೆ ಅನುಭವಿಸ್ತೀವಿ. ಈಗೇನು ಮಾಡೋದು? ನಾವಿಬ್ರು ಒಳ್ಳೇ ಸ್ನೇಹಿತ್ರಾಗಿ ಮುಂದುವರಿಯೋಣ... ಕೇಳಿಸ್ತಿದೆಯಾ...' ಮುಂದಿನದೇನನ್ನೂ ಮಿದುಳು ಗ್ರಹಿಸಲಿಲ್ಲ. ಕಷ್ಟಪಟ್ಟು ಬರೆದ ಚಿತ್ರವೊಂದು